# ಶ್ರೀಮಾತೆ -ಒಂದು ಪ್ರವಚನ

ಇಂಗ್ಲಿಷ್ ಮೂಲ : **ಸ್ವಾಮಿ ಅಶೇಷಾನಂದ** ಅನುವಾದ : **ಸ್ವಾಮಿ ಜ್ಞಾನಯೋಗಾನಂದ**

ಈ ಲೇಖನವು ೧೯೮೩ರ ಏಪ್ರಿಲ್ ೨೬ರಂದು ಅಮೆರಿಕದ ನ್ಯೂಯಾರ್ಕಿನಲ್ಲಿರುವ ರಾಮಕೃಷ್ಣ-ವಿವೇಕಾನಂದ ಸೆಂಟರ್‌ನ ಪ್ರಾರ್ಥನಾ ಮಂದಿರದಲ್ಲಿ ನಡೆದ ವಿಶೇಷ ಕಾರ್ಯಕ್ರಮದಲ್ಲಿ ಸ್ವಾಮಿ ಅಶೇಷಾನಂದರು ನೀಡಿದ ಪ್ರವಚನವನ್ನು ಬರಹರೂಪಕ್ಕಿಳಿಸಿ ಪ್ರಕಟಿಸಲಾದ ಲೇಖನದ ಕನ್ನಡಾನುವಾದ. ಮೂಲ ಲೇಖನವು 'Holy Mother - A Talk' ಎಂಬ ಹೆಸರಿನಲ್ಲಿ ಲಂಡನ್ನಿನಿಂದ ಪ್ರಕಟವಾಗುತ್ತಿದ್ದ 'Vedanta for East and West' ಪತ್ರಿಕೆಯ (ಈಗ ಈ ಪತ್ರಿಕೆ 'Vedanta' ಎಂಬ ಹೆಸರಿನಿಂದ ಪ್ರಕಟವಾಗುತ್ತಿದೆ) ೧೯೫ನೇ ಸಂಚಿಕೆಯಲ್ಲಿ ಪ್ರಕಟವಾಗಿತ್ತು (೧೯೮೪ರ ಜನವರಿ-ಫೆಬ್ರವರಿ ಸಂಚಿಕೆ). ಸ್ವಾಮಿ ಅಶೇಷಾನಂದರು ಶ್ರೀಮಾತೆಯವರ ಶಿಷ್ಯರು ಹಾಗೂ ಅಮೆರಿಕದ ಪೋರ್ಟ್‌ಲ್ಯಾಂಡ್ ವೇದಾಂತ ಸೊಸೈಟಿಯ ಅಧ್ಯಕ್ಷರಾಗಿದ್ದರು.

ಸ್ನೇಹಿತರೇ, ನಿಮ್ಮೊಡನೆ ಈ ವಿಷಯವನ್ನು ಮುಕ್ತವಾಗಿ ಹೇಳಬಯಸುತ್ತೇನೆ — ನನ್ನ ಸೋದರ ಸಂನ್ಯಾಸಿ ಸ್ವಾಮಿ ಪವಿತ್ರಾನಂದರನ್ನು ಕಳೆದುಕೊಂಡು ಅವರ ಸಂಸರ್ಗದಿಂದ ನಾನು ಸಾಕಷ್ಟು ವಂಚಿತನಾಗಿದ್ದೇನೆ. ಅಂಧಕಾರದಲ್ಲಿ ಜ್ಯೋತಿಯಂತಿದ್ದ ಅವರೊಂದಿಗೆ ನಿಕಟ ಸಂಪರ್ಕವುಂಟಾಗಿರುವವರಿಗೆಲ್ಲ ಇದೇ ಭಾವನೆ ಉಂಟಾಗಿರಬಹುದು. ನಮ್ಮ ಕಾಲೇಜು ದಿನಗಳಲ್ಲಿ ನಾವಿಬ್ಬರೂ ಆತ್ಮೀಯ ಸ್ನೇಹಿತರಾಗಿದ್ದೆವು. ಶ್ರೀರಾಮಕೃಷ್ಣರ ಮಾನಸಪುತ್ರರಾದ ಸ್ವಾಮಿ ಬ್ರಹ್ಮಾನಂದರ ಪದತಲದಲ್ಲಿ ನಾವಿಬ್ಬರೂ ಕುಳಿತಿದ್ದೆವು. ಸ್ವಾಮಿ ತುರೀಯಾನಂದರೊಂದಿಗೆ ಸ್ವಾಮಿ ಪವಿತ್ರಾನಂದರು ವಾದ ಮಾಡುತ್ತಿದ್ದುದನ್ನು ನಾನು ಕಂಡಿದ್ದೇನೆ. ಆಗ ತುರೀಯಾನಂದರು ಅವರತ್ತ ನಸುನಗೆ ಬೀರುತ್ತಿದ್ದರು. ಆಗ ನಾನು ಯೋಚಿಸಿದ್ದೆ: 'ಯಾರು ಈ ಹುಡುಗ? ವೇದಾಂತದ ಸಿಂಹದಂತಿರುವ ಸ್ವಾಮಿ ತುರೀಯಾನಂದರೊಡನೆ ವಾದ ಮಾಡಲು ಇವನಿಗೆಷ್ಟು ಧೈರ್ಯ!' ಅನಂತರ ಸ್ವಾಮಿ ಅಖಿಲಾನಂದರ ಮೂಲಕ ನನಗೆ ಅವನ ಬಗ್ಗೆ ತಿಳಿಯಿತು.

ನಾನು ಮತ್ತು ಸ್ವಾಮಿ ಅಖಿಲಾನಂದರು ಒಂದೇ ಕಾಲೇಜಿನಲ್ಲಿ ಓದುತ್ತಿದ್ದೆವು. ನನಗಿಂತ ಅವರು ಒಂದು ವರ್ಷ ಹಿರಿಯರು. ಅಖಿಲಾನಂದರೇ ನನ್ನನ್ನು ರಾಮಕೃಷ್ಣ ಮಹಾಸಂಘದ ಅಧ್ಯಕ್ಷರಾದ ಸ್ವಾಮಿ ಬ್ರಹ್ಮಾನಂದಜಿಯವರಿಗೆ ಪರಿಚಯಿಸಿದ್ದರು. ಹೆಚ್ಚಾಗಿ ಪ್ರತಿವಾರವೂ ನಾವು ಸ್ವಾಮಿ ಬ್ರಹ್ಮಾನಂದರನ್ನು ಭೇಟಿಯಾಗಿ, ಅವರಿಗೆ ಪ್ರಣಾಮಗಳನ್ನು ಸಲ್ಲಿಸುತ್ತಿದ್ದೆವು. ಒಂದು ಸಲ ಸಾಯಂಕಾಲ ಮಹಾರಾಜರು ಬಲರಾಮ ಬಸುವಿನ ಮನೆಯಲ್ಲಿರಲಿಲ್ಲ. ಕೆಲವು ಮಂದಿ ಭಕ್ತರು, ಶ್ರೀಮಾತೆಯವರನ್ನು ನೋಡಲು 'ಉದ್ಬೋಧನ'ಕ್ಕೆ ಬರುತ್ತೀಯಾ ಎಂದು ನನ್ನನ್ನು ಕೇಳಿದರು. ನಾನು ಅಖಿಲಾನಂದರನ್ನು ಕೇಳಿದೆ, ಅವರು ಬರುವರೇ — ಎಂದು. ಅವರೆಂದರು, ''ನನಗೆ ಒಬ್ಬರು ಹಿರಿಯ ಸ್ವಾಮಿಗಳೊಂದಿಗೆ ಸ್ವಲ್ಪ ಕೆಲಸವಿದೆ. ನನಗೆ ಬರಲಾಗುವುದಿಲ್ಲ. ಆದರೆ ನೀನು ಹೋಗುವುದು ಒಳ್ಳೆಯದು. ನಾನು ಶ್ರೀಮಾತೆಯವರನ್ನು ನೋಡಿದ್ದೇನೆ, ಆದರೆ ನೀನು ನೋಡಿಲ್ಲ. ಅವರನ್ನು ನೋಡುವುದು ನಿನ್ನ ಪಾಲಿಗೆ ಅದೃಷ್ಟದ ಸಂಗತಿಯಾದೀತು.''

ಬಲರಾಮ ಬಸುವಿನ ಮನೆಯಿಂದ ಕಾಲು ನಡಿಗೆಯಲ್ಲಿ ಹತ್ತು-ಹದಿನೈದು ನಿಮಿಷದಷ್ಟು ದೂರದಲ್ಲಿ 'ಉದ್ಬೋಧನ' ವಿತ್ತು. ಒಂದು ದಿನ 'ಉದ್ಬೋಧನ'ದಲ್ಲಿ ಕಚೇರಿಯಲ್ಲಿ ನಾನು ಕುಳಿತಿದ್ದೆ; ಅಷ್ಟರಲ್ಲಿ ಅಲ್ಲಿಗೆ ಬಂದ ಧೀರಾನಂದರು (ಕೃಷ್ಣಲಾಲ್ ಮಹಾರಾಜ್) ನನಗೆ ಹೇಳಿದರು, ''ಏ ಹುಡುಗ, ನಿನ್ನನ್ನು ನಾನು ಬಲರಾಮ ಬಸುವಿನ ಮನೆಯಲ್ಲಿ ಅನೇಕ ಬಾರಿ ನೋಡಿದ್ದೇನೆ. ಯಾರು ನಿನ್ನ ಜವಾಬ್ದಾರಿ ತೆಗೆದುಕೊಳ್ಳುವರು?'' ಆಗ ನಾನು ಕ್ಯಾಂಟ್, ಹೆಗಲ್ ಹಾಗೂ ನನ್ನ ಪ್ರಿಯ ತತ್ತ್ವಜ್ಞಾನಿ ಪ್ಲೇಟೋ ಇವರ ಕುರಿತು ಅಧ್ಯಯನ ಮಾಡುತ್ತಿದ್ದೆ. ಪಾಶ್ಚಾತ್ಯ ತತ್ತ್ವಶಾಸ್ತ್ರದಲ್ಲೆಲ್ಲ ಪ್ಲೇಟೋ ಅತಿ ಶ್ರೇಷ್ಠ ತತ್ತ್ವಜ್ಞಾನಿಯೆಂದು ಆಗ ನಾನು ಭಾವಿಸಿದ್ದೆ. ತರ್ಕಶಾಸ್ತ್ರದಲ್ಲಿ ನನಗೆ ಅರಿಸ್ಟಾಟಲ್ ಇಷ್ಟವಾಗಿದ್ದ; ಆದರೆ ಪ್ಲೇಟೋನ ಅತೀತವಾದದ (transcendental) ಆದರ್ಶ ನನಗೆ ಅಚ್ಚುಮೆಚ್ಚಿನದಾಗಿತ್ತು. ಅಮೆರಿಕದ ಯುವಕರಂತೆ, ನಾನೊಬ್ಬ ಕಠೋರ ವೈಯಕ್ತಿಕವಾದಿ ಎಂದು ಸ್ವಾಮಿ ಧೀರಾನಂದರಿಗೆ ವಿವರಿಸಿ ಹೇಳಿದೆ. ಸೇಂಟ್ ಪಾಲ್ ಕಾಲೇಜಿನಲ್ಲಿ ಬೈಬಲನ್ನು ಓದುವುದು ಕಡ್ಡಾಯವಾಗಿತ್ತು. ನಾನು ಭಗವದ್ಗೀತೆಯನ್ನು ಓದಿರಲಿಲ್ಲ. ಸ್ವಾಮಿ ಧೀರಾನಂದರು ಸುಮ್ಮನಿದ್ದರು; ಕೊನೆಗೆ ಹೇಳಿದರು, ''ನಿನಗೆ ಆಧ್ಯಾತ್ಮಿಕ ಜೀವನದ ಬಗ್ಗೆ ಏನೂ ಗೊತ್ತಿಲ್ಲ. ಆಧ್ಯಾತ್ಮಿಕ ಜೀವನದಲ್ಲಿ ದಾರಿದೀಪ ತೋರಿಸಿ ಕೊಟ್ಟು ಮುನ್ನಡೆಸುವ ಒಬ್ಬ ಗುರು ಇರಬೇಕು. ಒಂದು ವೇಳೆ ನೀನು ಕತ್ತಲೆ ಕವಿದಿರುವ ಒಂದು ಗುಹಾದೇವಾಲಯಕ್ಕೆ ಹೋದರೆ, ನೀನು ಒಬ್ಬಂಟಿಯಾಗಿದ್ದರೆ ಗುಹೆಯ ಗೋಡೆಗೆ ತಲೆ ಹೊಡೆದುಕೊಳ್ಳುವೆ. ಆದರೆ ದೀಪ ಹಿಡಿದು ದಾರಿ ತೋರಿಸುವ ಅರ್ಚಕ ಅಲ್ಲಿದ್ದರೆ, ಆಗ ನಿನಗೆ ದೇವರ ಮೂರ್ತಿ ಕಾಣಿಸುವುದು. ನಿನಗೇನೂ ಏಟು ಬೀಳದು; ದೇವರ ದರ್ಶನ ಹೊಂದಿ ನೀನು ತೃಪ್ತನಾಗುವೆ.'' ನಾನು ಸ್ವಾಮೀಜಿಯವರನ್ನು ಕೇಳಿದೆ, ''ಹಾಗೆಂದರೆ ಏನು? ದಯವಿಟ್ಟು ವಿವರಿಸಿ ಹೇಳಿ.'' ಅವರೆಂದರು, ''ಅಂದರೆ ನಾನು ಹೇಳಿದ್ದರ ಅರ್ಥ ಹೀಗೆ— ಮೇಲಂತಸ್ತಿನಲ್ಲಿ ಶ್ರೀಮಾತೆಯವರಿದ್ದಾರೆ. ಅಲ್ಲಿಗೆ ಹೋಗಿ, ಅವರ ಕೃಪೆಗಾಗಿ ಪ್ರಾರ್ಥಿಸು; ಆಧ್ಯಾತ್ಮಿಕ ಜೀವನದಲ್ಲಿ ದೀಕ್ಷೆ ಪಡೆಯಲು ಬೇಡಿಕೋ.''

ಅದು ೧೯೧೭ನೇ ಇಸವಿ. ಆ ದಿನಗಳಲ್ಲಿ ಶ್ರೀಮಾತೆಯವರನ್ನು ಕುರಿತು ಹೊರಗೆ ಹೆಚ್ಚು ಪ್ರಚಾರವಿರಲಿಲ್ಲ. ಅವರ ಜೀವನವನ್ನು ವಿವರಿಸುವ ಪುಸ್ತಕಗಳು ಲಭ್ಯವಿರಲಿಲ್ಲ. ಅವರ ಭಾವಚಿತ್ರಗಳೂ ಸಿಗುತ್ತಿರಲಿಲ್ಲ. ಶ್ರೀಮಾತೆಯವರು ಕಲ್ಕತ್ತೆಗೆ ಬಂದಾಗ ಅವರಿಗೂ ಅವರ ಸಂಬಂಧಿಕರಿಗೂ ಅನುಕೂಲವಾಗುವಂತೆ ಸ್ವಾಮಿ ಶಾರದಾನಂದರು 'ಉದ್ಬೋಧನ'ವನ್ನು ಕಟ್ಟಿಸಿದ್ದರು. ನಾನು ಕುಳಿತಿದ್ದ ಕಚೇರಿಯು ಕೆಳ ಅಂತಸ್ತಿನಲ್ಲಿತ್ತು. ಮೇಲಿನ ಅಂತಸ್ತಿನಲ್ಲಿ ಮಂದಿರವಿತ್ತು; ಶ್ರೀಮಾತೆಯವರು ಅಲ್ಲೇ ವಾಸಿಸುತ್ತಿದ್ದರು. ಮಹಿಳೆಯರಿಗೆ ಶ್ರೀಮಾತೆಯವರ ಭೇಟಿಗೆ ಪ್ರತಿದಿನವೂ ಅವಕಾಶವಿತ್ತು. ಆದರೆ ಪುರುಷರು ಮಂಗಳವಾರ ಮತ್ತು ಶನಿವಾರ ಮಾತ್ರ ಅವರನ್ನು ಭೇಟಿಯಾಗಬಹುದಾಗಿತ್ತು. ಶ್ರೀಮಾತೆಯವರಿಗೆ 'ಉದ್ಬೋಧನ'ದಲ್ಲಿ ಹಾಗೂ ಜಯರಾಮಬಾಟಿಯಲ್ಲಿ ಸೇವೆ ಮಾಡುತ್ತಿದ್ದ ಬ್ರಹ್ಮಚಾರಿ ರಾಸಬಿಹಾರಿ ನಾನಿದ್ದ ಕಚೇರಿಗೆ ಬಂದು ಹೇಳಿದ, ''ಶ್ರೀಮಾತೆಯವರನ್ನು ಭೇಟಿಯಾಗಬೇಕೆಂದಿರುವವರು ನನ್ನ ಜೊತೆ ಬನ್ನಿ. ಶ್ರೀಮಾತೆಯವರೊಂದಿಗೆ ಮಾತನಾಡಬಾರದು, ಅವರ ಪಾದಗಳನ್ನು ಮುಟ್ಟಿ ನಮಸ್ಕಾರ ಮಾಡಿ, ಹಾಗೂ ಇನ್ನೊಂದು ಮೆಟ್ಟಲಲ್ಲಿ ಇಳಿದು ಕೆಳ ಅಂತಸ್ತಿಗೆ ಮರಳಬೇಕು'' ಎಂದು ಅವರು ತಿಳಿಸಿದರು. ಅಂತೆಯೇ ನಾನು ಅವರ ಹಿಂದೆ ಹೋದೆ; ತಲೆಯನ್ನು ಸೆರಗಿನಿಂದ ಮುಚ್ಚಿಕೊಂಡಿದ್ದ ಶ್ರೀಮಾತೆಯವರ ಮುಂದೆ ಹೋದೆ, ಅವರ ಪಾದಗಳನ್ನು ಸ್ಪರ್ಶಿಸಿ ನಮಸ್ಕಾರ ಮಾಡಿದೆ. ಬಳಿಕ ಕೆಳ ಅಂತಸ್ತಿಗೆ ಮರಳಿದೆ. ನನ್ನನ್ನು ನೋಡಿ ಸ್ವಾಮಿ ಧೀರಾನಂದರು ಕೇಳಿದರು: ''ನೀನು ಶ್ರೀಮಾತೆಯವರ ಬಳಿ ಕೃಪೆಗಾಗಿ ಪ್ರಾರ್ಥಿಸಿದೆಯೇನು? ನಿನಗೆ ಮಂತ್ರದೀಕ್ಷೆ ನೀಡಲು ಕೇಳಿಕೊಂಡೆಯೇನು?'' ನಾನಂದೆ, ''ಮಹಾರಾಜ್, ನನಗೆ ಮಾತನಾಡಲು ಅನುಮತಿಯಿರಲಿಲ್ಲ.'' ಆಗ ಅವರು ರಾಸಬಿಹಾರಿ ಮಹಾರಾಜರಿಗೆ ಹೇಳಿದರು, ''ರಾಸಬಿಹಾರಿ, ಈ ಹುಡುಗನನ್ನು ನೀನು ಶ್ರೀಮಾತೆಯವರ ಬಳಿಗೆ ಕರೆದುಕೊಂಡು ಹೋಗು. ಇವನು ಮಹಾರಾಜರ (ಸ್ವಾಮಿ ಬ್ರಹ್ಮಾನಂದರ) ಬಳಿಗೆ ಹೋಗುತ್ತಿರುತ್ತಾನೆ ಹಾಗೂ ಅವನ ಮೇಲೆ ಶ್ರೀಮಾತೆ ಕೃಪೆ ತೋರಬೇಕು ಎಂದು ಕೇಳಿಕೋ.'' ರಾಸಬಿಹಾರಿ ತುಸು ಸಾಂಪ್ರದಾಯಿಕ ವ್ಯಕ್ತಿ ಎಂದು ಅರಿತಿದ್ದ ಅವರು ಅವನಿಗೆ ವಿವರಿಸಿದರು. ನಾನು ಬ್ರಾಹ್ಮಣ ಹುಡುಗನೆಂದೂ, ಒಳ್ಳೆಯ ಕುಟುಂಬದಿಂದ ಬಂದಿರುವವನೆಂದೂ, ಕಾಲೇಜಿನಲ್ಲಿ ಓದುತ್ತಿದ್ದೇನೆ ಎಂದೂ ತಿಳಿಸಿದರು. ಹೀಗೆ ನನಗೆ ಮತ್ತೆ ಶ್ರೀಮಾತೆಯವರನ್ನು ಭೇಟಿಯಾಗಲು ಅನುಮತಿ ದೊರೆಯಿತು. ಈ ಬಾರಿ ಶ್ರೀಮಾತೆಯವರು ಮುಖದ ಮೇಲೆ ಸೆರಗನ್ನು ಎಳೆದುಕೊಂಡಿರಲಿಲ್ಲ. ಶ್ರೀಮಾತೆ ನನಗೆ ಹೇಳಿದರು, ''ಯಾಕೆ ಮಗೂ, ನೀನು ರಾಖಾಲನ ಬಳಿಗೆ ಹೋಗುತ್ತಿದ್ದೀಯಲ್ಲ! ರಾಖಾಲನೇ ನಿನಗೆ ದೀಕ್ಷೆ ಕೊಡಬಹುದು. ಅವನಿಗೆ ದೀಕ್ಷೆ ನೀಡಲು ಅಧಿಕಾರವಿದೆ, ಮತ್ತೆ ನನ್ನನ್ನೇಕೆ ಕೇಳುತ್ತಿದ್ದೀಯಾ?'' ನಾನು ಹೀಗೆ ಹೇಳಲು ಅದೃಷ್ಟವಂತನಾಗಿದ್ದೆ — ''ಅಮ್ಮಾ, ನೀವು ನನ್ನ ಮೇಲೆ ಕೃಪೆ ತೋರಿದರೆ, ಅದು ನನ್ನ ಮಹಾಭಾಗ್ಯವೆಂದೇ ತಿಳಿಯುತ್ತೇನೆ. ದೇವರೇ ನನ್ನ ಬಳಿಗೆ ಕಳುಹಿಸಿದ ಭಾರೀ ದೊಡ್ಡ ಅದೃಷ್ಟವೆಂದೇ ನಾನು ಭಾವಿಸುತ್ತೇನೆ'' ಎಂದೆ. ಶ್ರೀಮಾತೆಯವರು ಸ್ವಲ್ಪ ಹೊತ್ತು ಸುಮ್ಮನಿದ್ದರು. ಬಳಿಕ ಒಪ್ಪಿಗೆ ನೀಡುತ್ತ, ''ಆಗಲಿ, ಎರಡು ದಿನ ಗಳ ನಂತರ ಬಾ. ಗಂಗಾಸ್ನಾನ ಮಾಡಿ, ತಿಂಡಿಯೇನೂ ತಿನ್ನದೆ, ಕೆಳ ಅಂತಸ್ತಿನ ಕಚೇರಿಗೆ ಬಾ. ನಾನು ಕರೆ ಕಳುಹಿಸುವವರೆಗೆ ಅಲ್ಲೇ ಕಾಯುತ್ತಿರು. ನಾನು ಠಾಕೂರರ (ಶ್ರೀರಾಮಕೃಷ್ಣರ) ಪೂಜೆ ಮಾಡಿದ ಬಳಿಕ, ನಿನ್ನನ್ನು ಮೇಲಂತಸ್ತಿಗೆ ಮಂತ್ರದೀಕ್ಷೆಗಾಗಿ ಕರೆಯಲು ಯಾರನ್ನಾದರೂ ಕಳುಹಿಸಿಕೊಡುತ್ತೇನೆ'' ಎಂದರು.

ನಾನು ಕೆಳ ಅಂತಸ್ತಿಗೆ ಬಂದು, ಶ್ರೀಮಾತೆಯವರು ಹೇಳಿದ್ದನ್ನೆಲ್ಲ ಸ್ವಾಮಿ ಧೀರಾನಂದರಿಗೆ ತಿಳಿಸಿದಾಗ, ಅವರಿಗೆ ತುಂಬಾ ಆನಂದವಾಯಿತು. ನನಗಿಂತಲೂ ಹೆಚ್ಚಿನ ಆನಂದ ಅವರಿಗಾದಂತೆ ಅನ್ನಿಸುತ್ತಿತ್ತು. ಮಂತ್ರದೀಕ್ಷೆಯ ರೂಪದಲ್ಲಿ ನಾನು ಒಬ್ಬರು ಮಹಾವ್ಯಕ್ತಿಯ ಕೃಪೆಯನ್ನು ಪಡೆಯಲಿದ್ದೇನೆ ಎಂಬ ವಿಷಯ ಆಗ ನನಗೆ ಅರ್ಥವಾಗಿರಲಿಲ್ಲ. ಇದ್ದಕ್ಕಿದ್ದಂತೆ ಅದು ನನಗೆ ಬಂದೊದಗಿತ್ತು. ಆಗ ನನಗೆ ಹದಿನೇಳು ವರ್ಷ ವಯಸ್ಸಾಗಿತ್ತು. ಮಂತ್ರದೀಕ್ಷೆಯ ಅರ್ಥವೇನೆಂದು ನನಗೆ ಗೊತ್ತಿರಲಿಲ್ಲ. ಶ್ರೀಮಾತೆಯವರು ನನಗೆ ತುಂಬ ಆತ್ಮೀಯರೆಂಬಂತೆ ನಾನು ಅರಿತುಕೊಳ್ಳಲು, ನಾನು ಅಪರಿಚಿತನಾಗಿದ್ದರೂ ಅವರು ನನ್ನವರೇ ಆಗಿದ್ದಾರೆ ಎಂದು ನಾನು ತಿಳಿದುಕೊಳ್ಳಲು ಅವರು ಬಯಸಿದ್ದಾರೆ ಎಂದು ನಾನು ಭಾವಿಸಿದ್ದೆ. ನಿಜ ಹೇಳಬೇಕೆಂದರೆ, ಶ್ರೀಮಾತೆಯವರು ಸಾಕ್ಷಾತ್ ಜಗನ್ಮಾತೆಯೇ ಆಗಿದ್ದಾರೆ ಎಂದು ಆಗ ನಾನು ಯೋಚಿಸಿರಲೇ ಇಲ್ಲ. ಶ್ರೀಮಾತೆಯವರ ಈ ಇನ್ನೊಂದು ಸ್ವರೂಪವನ್ನು ನನಗೆ ಮುಂದೊಮ್ಮೆ ತಿಳಿಸಿಕೊಟ್ಟವರು ಸ್ವಾಮಿ ಶಾರದಾನಂದರು. ಶ್ರೀಮಾತೆಯವರು ತಮ್ಮ ಎಲ್ಲ ಶಕ್ತಿಯನ್ನೂ ಅಡಗಿಸಿಟ್ಟುಕೊಂಡಂತೆ ಇದ್ದರು. ಅವರು ಅತ್ಯಂತ ಕರುಣಾಮಯಿ, ಪ್ರೇಮಮಯಿ ಹಾಗೂ ಅನುಕಂಪದಿಂದ ಕೂಡಿದವರು ಎಂದು ನಾನು ಭಾವಿಸಿದ್ದೆ; ಆದರೆ ಅವರೇ ಮಾನವ ದೇಹವನ್ನು ಧರಿಸಿ ಧರೆಗೆ ಇಳಿದು ಬಂದ ಜಗನ್ಮಾತೆ ಎಂದು ನನಗೆ ತಿಳಿಯಲಿಲ್ಲ.

ಅನಂತರ ನಾನು ಶ್ರೀಮಾತೆಯವರೊಂದಿಗೆ ನಾನು ಭೇಟಿಯಾದ ವಿಷಯವನ್ನು ಸ್ವಾಮಿ ಅಖಿಲಾನಂದರಿಗೆ ತಿಳಿಸಿದೆ. ನನಗೆ ಮಂತ್ರದೀಕ್ಷೆ ಎಂದರೆ ಏನೆಂದು ತಿಳಿದಿಲ್ಲವೆಂದೂ, ನಾನೇನು ಮಾಡಬೇಕು — ಯಾವ ರೀತಿ ಅದಕ್ಕೆ ಸಿದ್ಧತೆ ಮಾಡಿಕೊಳ್ಳಬೇಕು ಎಂದು ನನಗೆ ತಿಳಿದಿಲ್ಲ ಎಂದೂ ನಾನು ಹೇಳಿದೆ. ಅದಕ್ಕೆ ಅವರು, ಏನೂ ಚಿಂತೆ ಬೇಡ, ತಾವು ಎಲ್ಲವನ್ನೂ ವಿವರಿಸಿ ಹೇಳುವುದಾಗಿ ತಿಳಿಸಿದರು. ನಾನು ಶ್ರೀಮಾತೆಯವರ ಬಳಿಗೆ ಹೋಗಬೇಕಿದ್ದ ದಿನದ ಹಿಂದಿನ ದಿನ, ಸ್ವಾಮಿ ಅಖಿಲಾ

ನಂದರೊಡನೆ ಕಾಲೇಜ್ ಸ್ಟ್ರೀಟ್ ಮಾರ್ಕೆಟ್‌ಗೆ ಹೋದೆ. ಗುರುದಕ್ಷಿಣೆ ನೀಡುವುದಕ್ಕಾಗಿ ನಾವು ಹಣ್ಣು, ಸಿಹಿತಿಂಡಿ, ಹೂವು ಹಾಗೂ ಒಂದು ಕೆಂಪು ಅಂಚಿನ ಸೀರೆ — ಇವನ್ನು ಕೊಂಡು ಕೊಂಡೆವು. ಗುರು –ಶಿಷ್ಯರ ನಡುವೆ ಸಂಬಂಧವನ್ನು ಬೆಸೆಯುವ ವಸ್ತುವೇ ಮಂತ್ರ ಎಂಬುದಾಗಿ ಸ್ವಾಮಿ ಅಖಿಲಾನಂದರು ನನಗೆ ತಿಳಿಸಿದರು. ದೀಕ್ಷೆ ನೀಡುವ ಮಂತ್ರ ಯಾವುದೇ ಆಗಿದ್ದರೂ ಅದನ್ನು ನಾವು ಸ್ವೀಕರಿಸಬೇಕು ಎಂದೂ ಅವರು ತಿಳಿಸಿದರು. ಇಲ್ಲಿ ಶಿಷ್ಯನು ಯಾವುದೇ ಮಾತನ್ನು ಆಡುವ ಹಾಗಿಲ್ಲ. ಆದರೆ ನನಗೆ ಈಗಾಗಲೇ ಇಷ್ಟದೇವತೆಯ ಬಗ್ಗೆ ಒಂದು ರೀತಿಯ ಭಾವನೆಯಿತ್ತು. ಶ್ರೀಮಾತೆಯವರು ಅದನ್ನು ಬದಲಾಯಿಸಿ ಬಿಟ್ಟರೆ ಆಗ ನಾನೇನು ಮಾಡಲಿ? ನನಗೆ ಸುಮ್ಮನಿರಲಾಗದು, ನಾನು ಶ್ರೀಮಾತೆಯವರಿಗೆ ಹೇಳಿಯೇಬಿಡಬೇಕು. ''ಅಮ್ಮಾ, ನನಗೆ ಇದು ಹೀಗಿದ್ದರೆ ಚೆನ್ನ'' ಎಂದು ನಾನು ಹೇಳಬೇಕು. ಇದನ್ನೇ ಚಿಂತಿಸುತ್ತ ಗೊಂದಲವುಂಟಾಗಿ, ಸ್ವಲ್ಪ ಹೊತ್ತು ನನಗೆ ನಿದ್ದೆ ಬರಲಿಲ್ಲ.

ಮರುದಿನ ಬೆಳಿಗ್ಗೆ ನಾನು ಮತ್ತು ಸ್ವಾಮಿ ಅಖಿಲಾನಂದರು ಗಂಗಾಸ್ನಾನ ಮಾಡಿ, 'ಉದ್ಬೋಧನ'ದ ಕಚೇರಿಯಲ್ಲಿ ಕಾಯ ತೊಡಗಿದೆವು. ಮೇಲಂತಸ್ತಿನಿಂದ ಕರೆ ಬಂತು, ನಾನು ಅಲ್ಲಿಗೆ ಹೋದೆ. ಶ್ರೀಮಾತೆ ಪೂಜೆ ಮಾಡಿದರು. ಆದರೆ ಮೊದಲಲ್ಲಿ ನನಗೆ ಧ್ಯಾನ ಮಾಡಲು ಹೇಳಲಿಲ್ಲ. ಅನಂತರ ಅವರು ನನಗೆ ಮಂತ್ರವನ್ನು ನೀಡಿದರು. ಅದು ನನ್ನ ಹೃದಯದಲ್ಲಿ ಗಂಟೆ ಯಂತೆ ಮೊಳಗಿತ್ತು. ನಾನಂದುಕೊಂಡೆ: 'ಶ್ರೀಮಾತೆ ಶ್ರೇಷ್ಠ ವ್ಯಕ್ತಿ ಯಿರಬೇಕು. ಅವರಿಗೆ ನನ್ನ ಮನಸ್ಸೆಲ್ಲ ತಿಳಿಯುವುದು.' ಹೀಗೆ ನನಗೆ ಸಮಾಧಾನವುಂಟಾಯಿತು. ಅನಂತರ ಶ್ರೀಮಾತೆ ನನ್ನನ್ನು ಕೇಳಿದರು, ''ನೀನು ಪ್ರಸಾದ, ಅಂದರೆ ಊಟ ಮಾಡು ವೆಯಾ?'' ನಾನಂದೆ, ''ಅಮ್ಮಾ, ನಾನು ಇಡೀ ದಿನ ರಜೆ ತೆಗೆದು ಕೊಂಡಿಲ್ಲ , ಅರ್ಧ ದಿನವಷ್ಟೇ ರಜೆ ಹಾಕಿದ್ದೇನೆ'' ಎಂದೆ. ಆಗ ಶ್ರೀಮಾತೆಯವರು ನನಗೆ ಹಣ್ಣು, ಸಿಹಿತಿಂಡಿ ನೀಡಿದರು. ನಾನು ಮೆಟ್ಟಿಲಿಳಿದು ಕೆಳ ಅಂತಸ್ತಿಗೆ ಬಂದೆ.

''ಇದೇನು ಮಂತ್ರದೀಕ್ಷೆ?'' ಎಂದು ಹಲವರು ಕೇಳುತ್ತಾರೆ. ಶ್ರೀಮಾತೆಯವರು ಹೀಗೆ ಉತ್ತರ ಕೊಡುತ್ತಿದ್ದರು — ''ನನ್ನ ಶಿಷ್ಯಂದಿರಿಗೆ ನಾನೇನು ಮಾಡಬೇಕಾಗಿದೆಯೋ ಅದನ್ನೆಲ್ಲ ನಾನು ದೀಕ್ಷೆ ನೀಡುವಾಗಲೇ ಮಾಡಿಬಿಡುತ್ತೇನೆ.'' ನಮ್ಮ ಸಂಘದ ಮಹಾನ್ ಸಂನ್ಯಾಸಿಗಳಿಂದ ಮಂತ್ರದೀಕ್ಷೆ ಪಡೆದವರೆಲ್ಲ ಯಾವಾ ಗಲೂ ನೆನೆಯುವ ಸಂಗತಿಯೇನೆಂದರೆ, ಗುರುವು ಮಂತ್ರದಲ್ಲೇ ಜೀವಿಸಿರುತ್ತಾನೆ ಎಂದು. ಮಂತ್ರದ ಉಚ್ಚಾರಣೆ ಮಾಡುವುದ ರಿಂದ ಗುರುವಿನ ಆಧ್ಯಾತ್ಮಿಕರೂಪವು ಪ್ರಕಟವಾಗುವುದು.

ಸಾಕ್ಷಾತ್ಕಾರ ಹೊಂದಿದವರು ನೀಡಿದ ಮಂತ್ರದಲ್ಲಿ ಅಗಾಧ ಶಕ್ತಿಯಿರುತ್ತದೆ ಎಂಬುದು ನಮ್ಮ ನಂಬಿಕೆ. ಹೀಗಿರುವಾಗ, ಸ್ವಯಂ ಜಗನ್ಮಾತೆಯೇ ಧರೆಗಿಳಿದು ಬಂದು, ಮಂತ್ರದೀಕ್ಷೆ ಯನ್ನು ಆಧ್ಯಾತ್ಮಿಕ ಸಾಧಕರಿಗೆ ನೀಡುವಾಗ ಎಂಥ ಶಕ್ತಿ ಅಲ್ಲಿ ಪ್ರಕಟವಾಗುವುದು ಎಂಬುದನ್ನು ನೀವು ಊಹಿಸಲಾರಿರಿ.

ರಾಸಬಿಹಾರಿ ಮಹಾರಾಜರು(ಸ್ವಾಮಿ ಅರೂಪಾನಂದರು) ಗಮನಿಸಿದರು, ನನ್ನ ದೀಕ್ಷೆಯಾದ ಬಳಿಕ ನಾನು ಜಪಮಾಲೆ ಯನ್ನು ಪಡೆದಿರಲಿಲ್ಲ. ಅವರು ಹೇಳಿದರು, ''ಶ್ರೀಮಾತೆ ನಿನಗೆ ಆಧ್ಯಾತ್ಮಿಕ ಉಪದೇಶಗಳನ್ನು ನೀಡಿದ್ದಾರೆ, ನಿಜ. ಆದರೆ ನಿನ್ನ ಬಳಿ ಜಪಮಾಲೆ ಇಲ್ಲ.'' ನಾನಂದೆ, ''ದಯವಿಟ್ಟು ನನಗೆ ಸಹಾಯ ಮಾಡುವಿರಾ?'' ಜಪಮಾಲೆಯನ್ನು ಕೊಂಡು ಕೊಳ್ಳಲು ಬೇಕಾದ ಹಣ ನೀಡುವುದಾದರೆ ಸಹಾಯ ಮಾಡುವು ದಾಗಿ ಅವರು ಹೇಳಿದರು. ಅಂತೆಯೇ ನಾನು ಅದಕ್ಕೆ ಬೇಕಾದ ಹಣವನ್ನು ಕೊಟ್ಟೆ. ಆಗ ಅವರು ಎರಡುದಿನ ಕಳೆದು ಬರಲು ಹೇಳಿದರು, ಅಷ್ಟರಲ್ಲಿ ಶ್ರೀಮಾತೆ ಜಪಮಾಲೆಯನ್ನು ಶುದ್ಧೀ ಕರಿಸಿ, ಪವಿತ್ರಗೊಳಿಸಿ ನೀಡುವರು ಎಂದರು. ಎರಡು ದಿನಗಳ ನಂತರ ನಾನು ಮರಳಿ ಬಂದೆ. ನನಗೋಸ್ಕರ ಜಪಮಾಲೆಯ ಎಲ್ಲ ಮಣಿಗಳನ್ನೂ ಅವರು ಪರೀಕ್ಷಿಸಿ ನೋಡಿ, ಎಲ್ಲವೂ ಬೆಳೆದ ಮಣಿಗಳೇ ಎಂದು ಪರೀಕ್ಷಿಸಿದ್ದರು. ನನಗೆ ಆಶ್ಚರ್ಯವಾಯಿತು. ನಾನು ಕೇಳಿದೆ, ''ನೀವು ಹೇಗೆ ಮಣಿಗಳು ಬೆಳೆದಿವೆಯೇ ಎಂದು ನೋಡುತ್ತೀರಿ? ಜನರು ಬೆಳೆದಿದ್ದಾರೆಯೇ, ಅವರಲ್ಲಿ ಸ್ಥಿರತೆ ಇದೆಯೇ ಎಂದೆಲ್ಲ ನಾವು ನೋಡುತ್ತೇವೆ, ಆದರೆ ಮಣಿಗಳಲ್ಲೂ ಹಾಗುಂಟೆ?'' ಅದಕ್ಕೆ ಅವರು ಒಂದು ವಿಧಾನವನ್ನು ಹೇಳಿ ದರು: ಒಂದು ಪಾತ್ರೆಯಲ್ಲಿ ನೀರು ತುಂಬಿ, ನೀರಿನಲ್ಲಿ ಮಣಿ ಯನ್ನು ಹಾಕಬೇಕು. ಆಗ ಅದು ಮುಳುಗಿದರೆ ಅದು ಬೆಳೆದಿದೆ ಎಂದೂ, ತೇಲಿದರೆ ಅದು ಬೆಳೆದಿಲ್ಲ ಎಂದೂ ಅರ್ಥ. ಅನಂತರ ನಾನು ಮೇಲಂತಸ್ತಿಗೆ ಹೋಗಿ, ಜಪಮಾಲೆಯೊಂದಿಗೆ ಶ್ರೀಮಾತೆ ಯವರ ಬಳಿಗೆ ಹೋದೆ. ಆಗ ಅವರು ಜಪಮಾಲೆಯೊಂದಿಗೆ ಜಪ ಮಾಡುವ ವಿಧಾನವನ್ನು ತಿಳಿಸಿಕೊಟ್ಟರು. ಇಷ್ಟದೇವತೆ ಯನ್ನು ಕುರಿತು ಚಿಂತಿಸುವುದು, ಧ್ಯಾನ ಮಾಡುವುದು ಹೇಗೆ ಎಂಬುದನ್ನೂ ಅವರು ತಿಳಿಸಿಕೊಟ್ಟರು.

ಆ ಶುಭದಿನಗಳಲ್ಲಿ ನಾನು ಶ್ರೀಮಾತೆಯವರಿಂದ ಏನನ್ನು ಪಡೆದೆ ಎಂಬುದನ್ನು ಅರ್ಥಮಾಡಿಕೊಳ್ಳಲು ಅಗತ್ಯವಾದ ಆಧ್ಯಾತ್ಮಿಕ ಜಾಗೃತಿಯನ್ನು ಮುಂದೆ ಸ್ವಾಮಿ ಶಾರದಾನಂದರು ನನಗೆ ನೀಡಿದರು. ಮುಂದೆ ಶ್ರೀಮಾತೆಯವರ ಕೃಪೆಯಿಂದ ನಾನು ಸ್ವಾಮಿ ಶಾರದಾನಂದರ ಕಾರ್ಯದರ್ಶಿಯಾದಾಗ, ಅವರ ಶಿಷ್ಯಂದಿರಿಗೆ ನೀಡಬೇಕಾದ ಉಪದೇಶಗಳನ್ನು ನನ್ನ ಮೂಲಕ ಹೇಳಿ ಬರೆಸಿದರು. ಶಿಷ್ಯನಿಗೆ ಮಂತ್ರವು ಮರೆತು ಹೋಗಿದ್ದರೆ, ಸ್ವಾಮೀಜಿಯವರೇ ಅವನಿಗೆ ವೈಯಕ್ತಿಕ ಪತ್ರ ಬರೆಯುತ್ತಿದ್ದರು. ಇಲ್ಲದಿದ್ದರೆ ನಾನೇ ಎಲ್ಲ ಉಪದೇಶಗಳನ್ನು ಬರೆಯುತ್ತಿದ್ದೆ. ಒಂದು ದಿನ ಸ್ವಾಮೀಜಿ ಧ್ಯಾನ ಮಾಡಿ ಬಂದ ನಂತರ, ಅವರ ಬಳಿಗೆ ಹೋಗಿ ಪ್ರಣಾಮ ಮಾಡಿದೆ. ''ಮಹಾ

ರಾಜ್, ಶ್ರೀಮಾತೆಯವರು ನನಗೆ ಸರಳವಾಗಿ ಉಪದೇಶ ನೀಡಿದ್ದರು. ಬೆಳಿಗ್ಗೆ ಹಾಗೂ ಸಾಯಂಕಾಲ ಅಥವಾ ವಿಶೇಷ ದಿನಗಳಲ್ಲಿ ಇಷ್ಟು ಸಂಖ್ಯೆಯಲ್ಲಿ ಜಪ ಮಾಡಬೇಕು ಇತ್ಯಾದಿಯಾಗಿ ನನಗೆ ಏನೂ ತಿಳಿಸಲಿಲ್ಲ. ಇದೇ ರೀತಿ ಮಾಡು ಎಂದು ನಿಗದಿಯಾದ ಒಂದು ವಿಧಾನವನ್ನು ಹೇಳಿಕೊಡಲಿಲ್ಲ. ನನಗೆ ಹಂತಹಂತವಾದ ಒಂದು ವಿಧಾನ ಬೇಕಾಗಿದೆ. ನೀವು ಏನಾದರೂ ಹೇಳಿಕೊಡುವಿರಾ?'' ಎಂದೆ. ಅದಕ್ಕೆ ಸ್ವಾಮಿ ಶಾರದಾನಂದರು ಹೇಳಿದರು, ''ನೀನು ಅತಿದೊಡ್ಡ ಮೂರ್ಖ. ಶ್ರೀಮಾತೆಯವರು ಸಾಕ್ಷಾತ್ ಜಗನ್ಮಾತೆಯೇ ಆಗಿದ್ದಾರೆ. ಈ ಕ್ರಮ, ವಿಧಾನ ಇವುಗಳನ್ನೆಲ್ಲ ಇತರ ಗುರುಗಳು ಹೇಳಿಕೊಡುತ್ತಾರೆ, ಆದರೆ ಶ್ರೀಮಾತೆಯವರಲ್ಲ. ಶ್ರೀಮಾತೆಯವರು ನಿನಗೆ ಏನನ್ನು ಹೇಳಿಕೊಟ್ಟಿದ್ದಾರೋ, ಅದು ಆಧ್ಯಾತ್ಮಿಕ ಪ್ರಪಂಚದಲ್ಲಿ ಕೊನೆಯ ಮಾತು. ನೀನು ನಿನ್ನ ಮಂತ್ರವನ್ನೇ ಗಟ್ಟಿಯಾಗಿ ಹಿಡಿದುಕೋ, ಅದನ್ನೇ ಉಚ್ಚರಿಸು, ನಿನ್ನ ಇಷ್ಟದೇವತೆಯ ಮೇಲೆಯೇ ಧ್ಯಾನ ಮಾಡು. ಭಗವಂತನ ದರ್ಶನಕ್ಕಾಗಿ ನಿನ್ನಲ್ಲಿ ವ್ಯಾಕುಲತೆ ಮೂಡಿದಾಗ, ನಿನ್ನ ಮನಸ್ಸಿಗೆ ಅದು ತಿಳಿದುಬರುವುದು. ನಿನ್ನ ಮನಸ್ಸು ಪರಮಾತ್ಮನಲ್ಲಿ ಸ್ಥಿರಗೊಳ್ಳುವುದು, ನಿನ್ನ ಆಸೆಗಳೆಲ್ಲವೂ ಪೂರೈಸುವುವು. ಶ್ರೀಮಾತೆಯವರು ನೀಡಿದ್ದಕ್ಕೆ ನಾನೇನಾದರೂ ಸೇರಿಸಬೇಕೆಂದು ಹೇಳುತ್ತಿದ್ದೀಯಾ? ಅವರ ಕೃಪೆಯಿಂದಾಗಿಯೇ ನಾನು ಈಗ ಇಲ್ಲಿದ್ದೇನೆ.'' ಸ್ವಾಮಿ ಶಾರದಾನಂದರು ಹೀಗೆ ನನ್ನ ಕಣ್ಣು ತೆರೆಸಿದರು. ಶ್ರೀಮಾತೆ ಕೇವಲ ಸಂತ ಮಹಿಳೆಯಷ್ಟೇ ಅಲ್ಲ ; ಅವರು ಸಾಕ್ಷಾತ್ ಜಗನ್ಮಾತೆಯೇ ಮೈವೆತ್ತು ಬಂದವರು, ಅವರೇ ಬ್ರಹ್ಮನ ಶಕ್ತಿ ಸ್ವರೂಪಿಣಿ ಎಂಬುದನ್ನು ತಿಳಿಸಿಕೊಟ್ಟರು. ಬೆಂಕಿ ಹಾಗೂ ಅದರ ಸುಡುವ ಶಕ್ತಿ ಹೇಗೆ ಅಭಿನ್ನವೋ, ಅದೇ ರೀತಿ ಶ್ರೀರಾಮಕೃಷ್ಣರು ಹಾಗೂ ಶ್ರೀಮಾತೆಯವರು ಅಭಿನ್ನರು. ನಮ್ಮ ಬೌದ್ಧಿಕ, ತಾತ್ತ್ವಿಕ ಅರಿವನ್ನು ಮೀರಿದ ಆಧ್ಯಾತ್ಮಿಕ ಸಂಬಂಧ ಅವರದು. ಪರಿಶುದ್ಧವಾದ, ಪವಿತ್ರ ಜೀವನದ, ಸರಳ ಜೀವನದ ಉದಾಹರಣೆ ಶ್ರೀಮಾತೆಯವರದು.

ದಿವ್ಯ ಚೈತನ್ಯದೊಂದಿಗೆ ಸಂಪರ್ಕ ಹೊಂದಬೇಕೆಂಬ ಇಚ್ಛೆ ಯಾರಿಗಾದರೂ ಉಂಟಾಗಿದ್ದರೆ, ಅವರ ಜೀವನ ಪವಿತ್ರವಾಗಿರಬೇಕು; ಶ್ರೀಮಾತೆಯವರ ಆದರ್ಶ ಜೀವನದಂತೆ ಸರಳವೂ ಪವಿತ್ರವೂ ಶಾಂತವೂ ಆದದ್ದಾಗಿರಬೇಕು. ಅವರು ಕೇವಲ ಮೌನದಿಂದ ಅಥವಾ ಏಕಾಂತವಾಗಿ ಇದ್ದವರಲ್ಲ; ಅವರು ತಮ್ಮ ಮನಸ್ಸನ್ನು ಅಂತರಾತ್ಮನೊಂದಿಗೆ, ಪರಮಾತ್ಮನೊಂದಿಗೆ ಒಂದುಗೂಡಿಸಿದ್ದರು. ಮಂತ್ರದೀಕ್ಷೆ ನೀಡುವ ಮೂಲಕ ಅವರು ಆಧ್ಯಾತ್ಮಿಕ ಶಕ್ತಿಯನ್ನು ತಮ್ಮ ಶಿಷ್ಯಂದಿರಿಗೆ ಪ್ರವಹಿಸುತ್ತಿದ್ದರು. ಅವರದು ಪವಿತ್ರವಾದ, ಶಾಂತವಾದ ಜೀವನ. ಆದರೆ ಅವರ ಸಾನ್ನಿಧ್ಯವೇ ಕೃಪೆ ಹಾಗೂ ಶಾಂತಿಗಳನ್ನು ಸೂಸುವ ಆಧ್ಯಾತ್ಮಿಕ ಪರಿಸರವನ್ನು ನಿಚ್ಚಳವಾಗಿ ಸೃಷ್ಟಿಸುತ್ತಿತ್ತು, ನಿಜವಾದ ತೀರ್ಥಕ್ಷೇತ್ರವೆಂಬಂತೆ.

ಶ್ರೀಮಾತೆಯವರು ಏನನ್ನು ಪ್ರತಿನಿಧಿಸುತ್ತಾರೆ ಎಂದು ನೀವು ಕೇಳಿದರೆ, ನಾನು ಮೊತ್ತ ಮೊದಲು ಹೇಳುವುದು ಪಶ್ಚಿಮದ ಮೆಡೋನಾಳ ಆದರ್ಶ– ಸಂಪೂರ್ಣ ಪರಿಶುದ್ಧವಾದ ಚಿರಕನ್ಯೆಯ ಆದರ್ಶ. ಅಷ್ಟೇ ಅಲ್ಲದೆ, ತಮ್ಮ ಸಂಬಂಧಿಕರ ನಡುವೆ ಕುಟುಂಬದ ಪರಿಸರದಲ್ಲಿ ಅವರು ನಡೆಸಿದ ಶಾಂತ ಹಾಗೂ ಪವಿತ್ರ ಜೀವನವು ಗೃಹಸ್ಥ ಜೀವನದ ಆದರ್ಶವನ್ನು ಪ್ರತಿನಿಧಿಸಿದೆ. ಗೃಹೀ ಭಕ್ತರೂ ಕೂಡ ಭಗವಂತನನ್ನು ಅರಸುತ್ತ ಹೇಗೆ ಅವನ ಸಾಕ್ಷಾತ್ಕಾರವನ್ನು ಹೊಂದಬಹುದು ಎಂಬುದನ್ನು ಅವರ ಜೀವನವು ತೋರಿಸಿಕೊಡುತ್ತದೆ. ಪ್ರಾಪಂಚಿಕ ಜೀವನದಲ್ಲಿ ಮುಳುಗಿದ್ದ ಅವರ ಬಂಧುಗಳ ನಡುವೆ ಬದುಕಿದ್ದರೂ, ಗೃಹಕೃತ್ಯದ ಬದುಕು ಹಾಗೂ ಆಳವಾದ ಆಧ್ಯಾತ್ಮಿಕ ಬದುಕುಗಳ ನಡುವೆ ಅವರು ಒಂದು ಅಸಾಧಾರಣ ಸಮತೋಲನವನ್ನು ಸಾಧಿಸಿದರು. ಅವರ ಬಂಧುಗಳು ಮುಕ್ತಿಯನ್ನು ಬಯಸಲಿಲ್ಲ; ಅವರಿಗೆ ಹಣ ಬೇಕಾಗಿತ್ತು, ತಮ್ಮ ಸಮಸ್ಯೆಗಳಿಗೆ ಪರಿಹಾರ ಬೇಕಾಗಿತ್ತು. ಗೃಹೀ ಭಕ್ತರಿಗೆ ವಿಶೇಷವಾಗಿ ದಾರಿದೀಪವಾಗಿದ್ದವರು ಶ್ರೀಮಾತೆಯವರೇ. ನನ್ನ ಪಾಲಿಗಂತೂ, ಶ್ರೀರಾಮಕೃಷ್ಣರು ಸಂನ್ಯಾಸಿ ಜೀವನದ ಆದರ್ಶವಾಗಿ ಕಾಣಿಸುತ್ತಾರೆ. ಅವರು ತಮ್ಮ ಯುವಕ ಶಿಷ್ಯಂದಿರಿಗೆ ನೀಡಿದ ತರಬೇತಿ ಅಂತಹದಾಗಿತ್ತು. ಶ್ರೀಮಾತೆಯವರ ಜೀವನದಲ್ಲಿ ನಾವು ಅತ್ಯಂತ ಸರಳತೆಯ ಆದರ್ಶವನ್ನು ಕಾಣುತ್ತೇವೆ. ಸರಳತೆ ಮತ್ತು ಪರಿಶುದ್ಧತೆ ಈ ಮೌಲ್ಯಗಳನ್ನು ನಾನು ಶ್ರೀಮಾತೆಯವರಿಂದ ಕಲಿತೆ. ಜೀವನದ ಎಲ್ಲ ಶ್ರೇಷ್ಠ ಸಂಗತಿಗಳೂ ಅತ್ಯಂತ ಸರಳವಾಗಿರುತ್ತವೆ. ಮಕ್ಕಳಾದ ನಾವು ತಾಯಿಯಲ್ಲಿ ಕಾಣುವ ಪ್ರೀತಿ ಅತ್ಯಂತ ಸರಳ. ಆದರೆ ಶ್ರೀಮಾತೆಯವರ ಸರಳತೆಯ ನಡುವೆ ಒಂದು ಸೂಕ್ಷ್ಮತೆಯಿತ್ತು — ಆದ್ದರಿಂದಲೇ ಅವರನ್ನು ಅರ್ಥ ಮಾಡಿಕೊಳ್ಳುವುದು ಅತ್ಯಂತ ಕಷ್ಟ. ನಾವು ಭಾವುಕವಾಗಿ, ಅಮಾನುಷವಾಗಿ ಹಾಗೂ ಅಸಾಧಾರಣವಾಗಿ ಚಿಂತಿಸುವುದನ್ನೇ ರೂಢಿಸಿಕೊಂಡಿದ್ದೇವೆ. ಸಹಜವಾಗಿ ಇರುವುದೆಂದರೆ ನಮಗೆ ತೀರ ಸಾಮಾನ್ಯವೆನಿಸುವುದು. ಮಂತ್ರವನ್ನು ನೀಡಿ, ಅದನ್ನು ನಮ್ಮ ತಲೆಯ ಮುಂದೆ ಮೂರು ಬಾರಿ ಸುತ್ತಿ ಹೀಗೆ ಮಾಡು, ಹೀಗೆ ಮಾಡು ಎಂದರೆ ನಾವು ಅದನ್ನು ಅಸಾಧಾರಣವೆಂದೇ ಭಾವಿಸುತ್ತೇವೆ. ಆದರೆ ಸರಳವಾಗಿ ಮಂತ್ರವನ್ನು ನೀಡಿದರೆ, ಅದು ಅಮೂಲ್ಯವೆಂದು ನಮಗನ್ನಿಸುವುದೆ? ಆಧ್ಯಾತ್ಮಿಕ ಉಪದೇಶಗಳನ್ನು ಸರಳವಾದ ವಿಧಾನದಲ್ಲಿ ಬೋಧಿಸಿದ ಗುರುವೇ ಶ್ರೀಮಾತೆ. ಅವರ ಕೃಪೆಯಿಂದಲೇ ನಾನು ರಾಮಕೃಷ್ಣ ಮಹಾಸಂಘವನ್ನು ಸೇರುವ ಆಲೋಚನೆಯನ್ನು ಮಾಡುವಂತಾದೆ, ಭಕ್ತರಿಗಾಗಿ ಅವರ ಕಾರ್ಯದಲ್ಲಿ ನನ್ನ ಪಾಲಿನ ಕಾರ್ಯವನ್ನು ನಿರ್ವಹಿಸುವಂತಾದೆ. ಆದರೆ ಅವರ ಬಗ್ಗೆ ನನಗೆ ತಿಳಿದಿರುವುದು ಅತ್ಯಂತ ಕಡಿಮೆ. ಶ್ರೀರಾಮಕೃಷ್ಣರು ಶ್ರೀಮಾತೆಯವರನ್ನು, ಅವರು ಪ್ರತಿನಿಧಿಸಿದ ಉನ್ನತ ಆದರ್ಶಗಳನ್ನು ನಿಜವಾಗಿ ಅರಿತಿದ್ದರು. ಅವರು ಗೋಲಾಪ್–ಮಾಗೆ ಒಂದು ವಿಚಾರವನ್ನು ತಿಳಿಸಿದ್ದರು. ಆ ಘಟನೆಯನ್ನು ನನಗೆ ಗೋಲಾಪ್ ಮಾ ವಿವರಿಸಿ ಹೇಳಿದ್ದರು.